## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಬೆಳಗಾವಿಯ ಚಿಕ್ಕೋಡಿ ತಾಲ್ಲೂಕಿನ ಜೈನಾಪೂರ ಗ್ರಾಮ ಪಂಚಾಯಿತಿಯ ನೌಕರನಾದ ಶ್ರೀ ಶಿವಾನಂದ ರಾಮಪ್ಪ ಘರಬುಡೆ ಹಾಗೂ ಸವದತ್ತಿ ತಾಲ್ಲೂಕಿನ ಚಚಡಿ ಗ್ರಾಮ ಪಂಚಾಯಿತಿಯ ನೌಕರನಾದ ಶ್ರೀ ಈರಪ್ಪ, ಶ್ರೀ ಶೈಲಪ್ಪಾ ಯಕ್ಕುಂಡಿ, ಇವರು ಕೋವಿಡ್-19 ನಿಯಂತ್ರಿಸುವಲ್ಲಿ ಶ್ರಮಿಸುತ್ತಿರುವಾಗ ಕೋವಿಡ್‌ದಿಂದ ಮೃತಪಟ್ಟಿರುವುದಕ್ಕೆ ಪರಿಹಾರ ಧನ ಮಂಜೂರು ಮಾಡುವ ಬಗ್ಗೆ.

ಓದಲಾಗಿದೆ:
1. ಸರ್ಕಾರದ ಆದೇಶ ಸಂಖ್ಯೆ:ಆರ್‌ಡಿಪಿಆರ್/535/ಜಿಪಿಎಸ್/2020, ದಿನಾಂಕ:29.08.2020.
2. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಬೆಳಗಾವಿ, ಇವರು ಆಯುಕ್ತರು, ಗ್ರಾಪಂ ಆಯುಕ್ತಾಲಯ, ಇವರಿಗೆ ವಿಳಾಸಿಸಿರುವ ಪತ್ರ ಜಿಪ/ಅಭಿವೃದ್ಧಿ/ಗ್ರಾಪಂಸಿ/ವಿವ-84/2020-21,ದಿನಾಂಕ:05.02.2021, 20.03.2021 ಮತ್ತು 24.03.2021.
3. ಸಮಸಂಖ್ಯೆಯ ಆದೇಶ ದಿನಾಂಕ:26.03.2021.

******

**ಪ್ರಸ್ತಾವನೆ:**

ಮೇಲೆ ಓದಲಾದ (1) ರ ಆದೇಶದಲ್ಲಿ ಕೋವಿಡ್-19 ಸಾಂಕ್ರಾಮಿಕ ರೋಗ ನಿಯಂತ್ರಣ ಕಾರ್ಯಕ್ರಮಗಳಡಿ ಗ್ರಾಮ ಪಂಚಾಯಿತಿಗಳಿಂದ ನಿಯೋಜಿತ ಸಿಬ್ಬಂದಿಯವರುಗಳು ರೋಗಗ್ರಸ್ಥರ ಸಂಪರ್ಕದಿಂದ ಮರಣ ಹೊಂದಿದಲ್ಲಿ ಜಿಲ್ಲಾ ಆರೋಗ್ಯಾಧಿಕಾರಿಗಳು ಮತ್ತು ಜಿಲ್ಲಾಧಿಕಾರಿಗಳು ಪ್ರಮಾಣೀಕರಿಸಿದಲ್ಲಿ ಅಂತಹವರ ಕುಟುಂಬಕ್ಕೆ ರೂ.30.00 ಲಕ್ಷಗಳನ್ನು ಜಿಲ್ಲಾ / ತಾಲ್ಲೂಕು ಪಂಚಾಯಿತಿಗಳಲ್ಲಿ ಲಭ್ಯವಿರುವ ಅನುದಾನದಿಂದ ವೆಚ್ಚ ಭರಿಸಲು ಆದೇಶಿಸಲಾಗಿದೆ.

ಮೇಲೆ ಓದಲಾದ (2) ರ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಬೆಳಗಾವಿ, ಇವರು ಆಯುಕ್ತರು, ಪಂಚಾಯತ್ ರಾಜ್ ಆಯುಕ್ತಾಲಯ, ಇವರಿಗೆ ವಿಳಾಸಿಸಿರುವ ಪತ್ರ ದಿನಾಂಕ:05.02.2021, 20.03.2021 ಮತ್ತು 24.03.2021 ಗಳಲ್ಲಿ ಸರ್ಕಾರದ ಆದೇಶ ಸಂಖ್ಯೆ:ಆರ್ ಡಿಪಿಆರ್ 535 ಜಿಪಿಎಸ್ 2020, ದಿನಾಂಕ:29.08.2020 ರನ್ವಯ ಬೆಳಗಾವಿ ಜಿಲ್ಲೆಯ ಚಿಕ್ಕೋಡಿ ತಾಲೂಕಿನ ಜೈನಾಪೂರ ಗ್ರಾಮ ಪಂಚಾಯಿತಿಯ ಕರವಸೂಲಿಗಾರನಾದ ಶ್ರೀ ಶಿವಾನಂದ ರಾಮಪ್ಪ ಘರಬುಡೆ ಹಾಗೂ ಸವದತ್ತಿ ತಾಲ್ಲೂಕಿನ ಚಚಡಿ ಗ್ರಾಮ ಪಂಚಾಯಿತಿಯ ನೌಕರನಾದ ಶ್ರೀ ಈರಪ್ಪ ಶ್ರೀಶೈಲಪ್ಪಾ ಯಕ್ಕುಂಡಿ, ಇವರು ಗ್ರಾಮಮಟ್ಟದಲ್ಲಿ ಕೋವಿಡ್-19 ನಿಯಂತ್ರಿಸಲು ಶ್ರಮಿಸುತ್ತಿರುವಾಗ ಕೋವಿಡ್-19 ಸೋಂಕು ತಗುಲಿ ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟಿದ್ದು, ಸದರಿಯವರ ಕುಟುಂಬಕ್ಕೆ ಪರಿಹಾರ ಧನ ಮಂಜೂರು ಮಾಡಲು ತಾಲ್ಲೂಕು ಮತ್ತು ಜಿಲ್ಲಾ ಪಂಚಾಯಿತಿಯಲ್ಲಿ ಯಾವುದೇ ಅನುದಾನ ಲಭ್ಯವಿಲ್ಲದ ಕಾರಣ, ಜಿಲ್ಲಾ ಪಂಚಾಯಿತಿಯ ಮಾತೃ ಖಾತೆಗೆ ಪರಿಹಾರ ಧನವನ್ನು ಬಿಡುಗಡೆ ಮಾಡುವಂತೆ ಕೋರಿದ್ದರು.

ಈ ಹಿನ್ನೆಲೆಯಲ್ಲಿ ಪ್ರಸ್ತಾವನೆಯನ್ನು ಪರಿಶೀಲಿಸಿ, ಮೃತ ನೌಕರರ ಕುಟುಂಬಕ್ಕೆ ಪರಿಹಾರ ಧನ ಮಂಜೂರು ಮಾಡಲು 2020-21ನೇ ಸಾಲಿನ ಲೆಕ್ಕಶೀರ್ಷಿಕೆ:2515-00-101-0-24-059 ಇತರ ವೆಚ್ಚಗಳಡಿ ಒದಗಿಸಲಾಗಿದ್ದ ರೂ.900.00ಲಕ್ಷಗಳ ಅನುದಾನದಲ್ಲಿ ಬಾಕಿ ಉಳಿಯುವ ಅನುದಾನವನ್ನು ಗ್ರಾಮ ಪಂಚಾಯತಿಗಳಿಗೆ ಶಾಸನ ಬದ್ಧ ಅನುದಾನ ಬಿಡುಗಡೆಗಾಗಿ ಲಭ್ಯವಿರುವ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ ಖಾತೆ ಸಂಖ್ಯೆ:64062923099, ವಿಧಾನ ಸೌಧ ಶಾಖೆ, ಬೆಂಗಳೂರು-560 001ಗೆ ಬಿಡುಗಡೆ ಮಾಡಲು ಆರ್ಥಿಕ ಇಲಾಖೆಯ ಅನುಮೋದನೆ ಪಡೆಯಲಾಗಿತ್ತು.

ಸದರಿ ಬ್ಯಾಂಕ್ ಖಾತೆಗೆ ಅನುದಾನವನ್ನು ಪೇಯಿಸ್ ರಸೀದಿ ಮೂಲಕ ಡ್ರಾ ಮಾಡಿ, ಜಮೆ ಮಾಡಬೇಕಾಗಿದ್ದು, ಆರ್ಥಿಕ ವರ್ಷವು ಕೊನೆಗೊಳ್ಳುತ್ತಿದ್ದುದರಿಂದ, ಸದರಿ ಕಾರ್ಯವಿಧಾನವನ್ನು ಅನುಸರಿಸಲು ಸಮಯದ ಅಭಾವವಿದ್ದ ಹಿನ್ನೆಲೆಯಲ್ಲಿ, ಲೆಕ್ಕಶೀರ್ಷಿಕೆ:2515-00-101-0-24-059 ಇತರೆ ವೆಚ್ಚಗಳಡಿ ಬಾಕಿ ಉಳಿದಿರುವ ರೂ.30.00ಲಕ್ಷಗಳನ್ನು ಜಿ.ಐ.ಎ. (ಸಿ.ಟಿ.ಎಸ್.13)ರಲ್ಲಿ ಡ್ರಾ ಮಾಡಿ, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಲೇಡಿ ಕರ್ಜನ್ ರಸ್ತೆ ಶಾಖೆ, ಬೆಂಗಳೂರು, ಇಲ್ಲಿ ನಿರ್ದೇಶಕರು, ಇ-ಆಡಳಿತ, ಇವರ ಹೆಸರಿನಲ್ಲಿರುವ ಇ-ಪಂಚಾಯತ್ ಖಾತೆ ಸಂಖ್ಯೆ:64095462822ಗೆ ಜಮೆ ಮಾಡಲು ಸಕ್ಷಮ ಪ್ರಾಧಿಕಾರದ ಅನುಮೋದನೆ ಪಡೆದು, ಮೇಲೆ ಓದಲಾದ (3)ರಲ್ಲಿ ಆದೇಶಿಸಿದೆ.

ಪ್ರಸ್ತುತ, ಸದರಿ ಮೊತ್ತವನ್ನು ಮೃತರ ಕುಟುಂಬಕ್ಕೆ ಪರಿಹಾರವಾಗಿ ಪಾವತಿಸಲು ಬೆಳಗಾವಿ ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಬ್ಯಾಂಕ್ ಖಾತೆಗೆ ಬಿಡುಗಡೆಗೊಳಿಸಬೇಕಾಗಿರುತ್ತದೆ.

Scanned with CamScanner

ಅದರಂತೆ ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ/57/ಇ-ಆಡಳಿತ/2021, ಬೆಂಗಳೂರು, ದಿನಾಂಕ:13.05.2021.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಗ್ರಾಮಮಟ್ಟದಲ್ಲಿ ಕೋವಿಡ್-19 ನಿಯಂತ್ರಿಸಲು ಶ್ರಮಿಸುತ್ತಿರುವಾಗ ಕೋವಿಡ್-19 ಸೋಂಕು ತಗುಲಿ ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟ ಬೆಳಗಾವಿ ಜಿಲ್ಲೆಯ ಚಿಕ್ಕೋಡಿ ತಾಲೂಕಿನ ಜೈನಾಪೂರ ಗ್ರಾಮ ಪಂಚಾಯಿತಿಯ ಕರವಸೂಲಿಗಾರನಾದ ಶ್ರೀ ಶಿವಾನಂದ ರಾಮಪ್ಪ ಘರಬುಡೆ ಹಾಗೂ ಸವದತ್ತಿ ತಾಲ್ಲೂಕಿನ ಚಚಡಿ ಗ್ರಾಮ ಪಂಚಾಯಿತಿಯ ನೌಕರನಾದ ಶ್ರೀ ಈರಪ್ಪ ಶ್ರೀಶೈಲಪ್ಪಾ ಯಕ್ಕುಂಡಿ, ಇವರುಗಳ ಕುಟುಂಬಕ್ಕೆ ಪರಿಹಾರ ಧನ ಪಾವತಿಗಾಗಿ ಬೆಳಗಾವಿಯ ಜಿಲ್ಲಾ ಪಂಚಾಯತ್ ಬ್ಯಾಂಕ್ ಖಾತೆ ಸಂಖ್ಯೆ:10356672349, IFSC Code:SBIN0001813, ಭಾರತೀಯ ಸ್ಟೇಟ್ ಬ್ಯಾಂಕ್, ರಿಸಾಲ್ದಾರ ಗಲ್ಲಿ, ಬೆಳಗಾವಿ, ಇಲ್ಲಿಗೆ ಇ-ಪಂಚಾಯತ್ ಖಾತೆ ಸಂಖ್ಯೆ:64095462822ರಲ್ಲಿ ಜಮೆಯಾಗಿರುವ ಮೊತ್ತದಿಂದ ರೂ.30.00ಲಕ್ಷಗಳನ್ನು (ಮೂವತ್ತು ಲಕ್ಷ ರೂಪಾಯಿಗಳು ಮಾತ್ರ) ಬಿಡುಗಡೆಗೊಳಿಸುವಂತೆ ವ್ಯವಸ್ಥಾಪಕರು, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಲೇಡಿ ಕರ್ಜನ್ ರಸ್ತೆ ಶಾಖೆ, ಬೆಂಗಳೂರು, ಇವರಿಗೆ ತಿಳಿಸಿ, ಆದೇಶಿಸಿದೆ.

ಮೇಲ್ಕಂಡ ಉದ್ದೇಶಕ್ಕಲ್ಲದೆ ಈ ಅನುದಾನವನ್ನು ಬೇರೆ ಯಾವುದೇ ಉದ್ದೇಶಕ್ಕೆ ಉಪಯೋಗಿಸತಕ್ಕದ್ದಲ್ಲ.

ಮೃತರ ಕುಟುಂಬಕ್ಕೆ ಪರಿಹಾರ ಮೊತ್ತವನ್ನು ಪಾವತಿಸಿದ ದಾಖಲೆಗಳನ್ನು ದೃಢೀಕರಣದೊಂದಿಗೆಸರ್ಕಾರಕ್ಕೆಸಲ್ಲಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

B. Naveenkumar 13/05/21.
**(ನವೀನ್ ಕುಮಾರ್. ಬಿ)**
ಸರ್ಕಾರದ ಅಧೀನ ಕಾರ್ಯದರ್ಶಿ (ಜಿ.ಪಂ.)(ಪ್ರಭಾರ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

**ಇವರಿಗೆ:**

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ / ಪ್ರಧಾನ ಕಾರ್ಯದರ್ಶಿಯವರು, ಆರ್ಥಿಕ ಇಲಾಖೆ / ಗ್ರಾಅಪ ಇಲಾಖೆ
3. ಆಯುಕ್ತರು, ಪಂಚಾಯತ್ ರಾಜ್ ಆಯುಕ್ತಾಲಯ, ಬೆಂಗಳೂರು
4. ನಿರ್ದೇಶಕರು, ರಾಜ್ಯ ಹುಜೂರು ಖಜಾನೆ, ಬೆಂಗಳೂರು.
5. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಬೆಳಗಾವಿ,
6. ಆಂತರಿಕ ಆರ್ಥಿಕ ಸಲಹೆಗಾರರು, ಗ್ರಾಅಪ ಇಲಾಖೆ.
7. ನಿರ್ದೇಶಕರು, ಪಂಚಾಯತ್ ರಾಜ್, ಗ್ರಾಅಪ ಇಲಾಖೆ.
8. ವಿಶೇಷಾಧಿಕಾರಿ (ಜಿಲ್ಲಾ ಪಂಚಾಯತ್) ಹಾಗೂ ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ, ಆರ್ಥಿಕ ಇಲಾಖೆ.
9. ವ್ಯವಸ್ಥಾಪಕರು, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಲೇಡಿ ಕರ್ಜನ್ ರಸ್ತೆ ಶಾಖೆ, ಬೆಂಗಳೂರು- ಇವರಿಗೆ ಅಗತ್ಯ ಕ್ರಮಕ್ಕಾಗಿ
10. ಮಾಹಿತಿ ಕೇಂದ್ರ / ವೆಬ್‌ಸೈಟ್/ಗ್ರಾಅಪ ಇಲಾಖೆ.
11. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು

Scanned with CamScanner